**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 739/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 14**

**ದಿನಾಂಕಃ 27.01.2026** **ಸಿಡಬ್ಲ್ಯೂ 16**

| | |
|---|---|
| ಹೆಸರು | ಡಾ. ಜಿ ಎಂ ಮೋಹನ್ ಕುಮಾರ |
| ತಂದೆ ಹೆಸರು | ಮಹದೇವಪ್ಪ |
| ವಯಸ್ಸು | 53 ವರ್ಷ |
| ಉದ್ಯೋಗ | ಫಾರೆನ್ಸಿಕ್ ತಜ್ಞರು |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಜುಲೈ 2016 ರಿಂದ 2025 ರವರೆಗೆ ಫಾರೆನ್ಸಿಕ್ ತಜ್ಞನಾಗಿ ದಾವಣಗೆರೆ ಚಿಗಟೇರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.02.2023 ರಂದು ಚಾಸಾ.17 ರವರ ಮನವಿ ಮೇರೆಗೆ ಮೃತ ವ್ಯಕ್ತಿ ಸಂದೀಪ ತಂದೆ ಪಾಲಾಕ್ಷಪ್ಪ, 34 ವರ್ಷ, ವಾಸಃ ಗೆದ್ಲಹಟ್ಟಿ ಗ್ರಾಮ, ಚನ್ನಗಿರಿ ಗ್ರಾಮ ಈತನ ಶವಪರೀಕ್ಷೆಯನ್ನು ಮಾಡಿ ಪಿ ಎಂ ವರದಿ ನೀಡಿರುತ್ತೇನೆ. ಅದೇ ದಿನ ಮದ್ಯಾಹ್ನ 3.05 ರಿಂದ 4.05 ರವರೆಗೆ ಮೃತನ ಶವಪರಿಕ್ಷೆಯನ್ನು ಮಾಡಿ ಶವ ಪರೀಕ್ಷಾ ವರದಿ ನೀಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಪಿ ಎಂ ವರದಿಯನ್ನು ಈಗಾಗಲೇ ನಿಪಿ.22 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.22(ಬಿ) ಎಂದು ಗುರುತಿಸಲಾಯಿತು. ಸದರಿ ವ್ಯಕ್ತಿಯ ಸಾವಿನ ಕಾರಣವನ್ನು ನಾನು ನನ್ನ ವರದಿಯಲ್ಲಿ ನಮೂದಿಸಿರುತ್ತೇನೆ. ಸದರಿ ವ್ಯಕ್ತಿ '' Electrocution '' ಕಾರಣದಿಂದ ತೀರಿಕೊಂಡಿರುತ್ತಾರೆ. ದೇಹದ ಮೇಲೆ ಹೊರಭಾಗದ ಗಾಯಗಳ ಬಗ್ಗೆ ನನ್ನ ವರದಿಯಲ್ಲಿ ನಮೂದಿಸಿರುತ್ತೇನೆ. ಸದರಿ ಗಾಯಗಳೆಂದರೆ 1. 10 ಅಡಿ ಸಣ್ಣ ಕರುಳಿನ ಭಾಗ 2. ಪಿತ್ತ ಜನಕಾಂಗ, ಮೂತ್ರ ಪಿಂಡಗುಲ್ಮವೆ ಶ್ವಾಸಕೋಶ. ದೇಹದ ಒಳಗಿನ ಅಂಗಾಂಶಗಳು ಅವುಗಳ ಸ್ಥಾನದಲ್ಲಿ ಇದ್ದವು. ಮೃತ ವ್ಯಕ್ತಿ ತೀರಿಕೊಂಡು ಸುಮಾರು 24-34 ಒಳಗೆ ಸಾವು ಸಂಭವಿಸಿತ್ತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಮೃತ ವ್ಯಕ್ತಿಯ ಹೆಂಡತಿ ಶವ ಪರೀಕ್ಷೆ ಮಾಡಲು ನನಗೆ ಯಾವುದೇ ಮನವಿ ನೀಡಿಲ್ಲ. ಸಾಕ್ಷಿಯು

ಮುಂದುವರೆದು ನನಗೆ ಪೊಲೀಸರು ಮನವಿ ನೀಡಿದ್ದರು ಎಂದು ನುಡಿಯುತಾತರೆ. ಮೃತ ವ್ಯಕ್ತಿ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಯಾವುದೇ ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಅನುಕೂಲವಾಗಲಿ ನಿಪಿ.22 ರಂತೆ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ